# ನುಡಿ ಚಂದ ನಡೆ ಚಂದ

● ಶಿವಲಿಂಗಪ್ಪ ಇಂಗಳಗಿ

**ಸಾ**ಮಾನ್ಯವಾಗಿ ಇಂದು ಸಾಮಾಜಿಕ ಜೀವನದಲ್ಲಿ ಘರ್ಷಣೆ, ವೈಮನಸ್ಸು, ಹಾಗೂ ಮನಸ್ತಾಪಗಳು ಉಂಟಾಗುವ ಮೂಲ ಕಾರಣಗಳಲ್ಲಿ ಒಂದು ಬಿರುಸುಮಾತು. ಪ್ರತಿಯೊಬ್ಬ ಜೀವಿಯೂ ಸುಖ, ಸಮಾಧಾನ ಪಡೆಯಬಯಸುವುದು ಸ್ವಾಭಾವಿಕವಾಗಿದೆ. ಆದರೆ ಯಾರು ಮೃದುಮಾತನಾಡುವ ಸಹಜ ಶೈಲಿಯನ್ನು ಕರಗತ ಮಾಡಿಕೊಂಡಿರುವರೋ ಅವರು ಸಂಗಡಿಗರನ್ನು ಸರಳವಾಗಿ ಒಲಿಸಿಕೊಂಡು ಜೀವನವನ್ನು ಸಫಲಗೊಳಿಸಿಕೊಳ್ಳುವರು. ಜಗಜ್ಯೋತಿ ಅಣ್ಣ ಬಸವಣ್ಣನವರ **ಅಯ್ಯಾ ಎನೆ ಸ್ವರ್ಗ, ಎಲವೋ ಎನೆ ನರಕ** ಎಂಬ ನುಡಿಮುತ್ತಿನಲ್ಲಿ ಈ ಮಾತಿನ ಮರ್ಮ ಅಡಕವಾಗಿದೆ. ಆದುದರಿಂದ ವ್ಯಾವಹಾರಿಕ ಜೀವನದಲ್ಲಿ ಸಫಲತೆಯನ್ನು ಪಡೆಯಲು ಸಂಗಡಿಗರೊಡನೆ ಮೃದುಮಾತನಾಡಲು ರೂಢಿಸಿಕೊಳ್ಳತಕ್ಕದ್ದು. "ಊಟ ಬಲ್ಲವನಿಗೆ ರೋಗವಿಲ್ಲ, ಮಾತು ಬಲ್ಲವನಿಗೆ ಜಗಳವಿಲ್ಲ" ಎಂಬ ಮಾತು ದಿಟ. ಮಾತನಾಡುವ ರೀತಿ-ನೀತಿ ಬಲು ಸರಳವಾಗಿರಬೇಕು. ಅಂದರೆ ಯಾವ ತರದ ಕೊಂಕುತನ, ಎಗ್ಗಿಲ್ಲಿಕತವಿಲ್ಲದೆ ಸಹಜವಾಗಿ ಮಾತಿನ ಸರಣಿ ಇರತಕ್ಕದ್ದು. ಕೋಪಭಾವ ಮಾನವ ಜೀವಿಗೆ ಮಾರಕವಾಗಿದೆ. ಕೋಪಭಾವದಿಂದ ಸಮತ್ವ ಹಾಗೂ ಸಾವಧಾನಕ್ಕೆ ಧಕ್ಕೆಯುಂಟು. ಕೆಟ್ಟ ನಾಲಗೆಯಷ್ಟು ಹರಿತವಾದ ಆಯುಧ ಬೇರೊಂದಿಲ್ಲ ಎಂದು ಪಿ. ಸಿಡ್ನೆ ಹೇಳಿದ್ದಾನೆ.

ನುಡಿದರೆ ಮುತ್ತಿನ ಹಾರದಂತಿರಬೇಕು, ಅಂದರೆ ನುಡಿಯು ಅಚ್ಚುಕಟ್ಟಾಗಿರಬೇಕು. ನಿರ್ಮಲ ಕಾಂತಿಯಿಂದ ಕೂಡಿರಬೇಕು. ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು — ಅಂದರೆ ಬುದ್ಧಿಯ, ಪ್ರತಿಭೆಯ ತೇಜಸ್ಸಿನಿಂದ ಕೂಡಿರಬೇಕು. ನುಡಿದರೆ ಸ್ಪಟಿಕದ ಸಲಾಕೆಯಂತಿರಬೇಕು, ಅಂದರೆ ಅಜ್ಞಾನವನ್ನು, ಜಡತೆಯನ್ನು, ವಕ್ರತೆಯನ್ನು ಭೇದಿಸಿ ನಾಶಗೊಳಿಸುವ ಸತ್ವ ಅದರಲ್ಲಿ ಇರಬೇಕು. ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು, ಅಂದರೆ ಪರಮಾತ್ಮನ ಪ್ರೀತಿ ಮೆಚ್ಚುಗೆಯನ್ನು ಪಡೆಯುವಂತಿರಬೇಕು. ನುಡಿ, ನಡೆಗೆ ವಿಸಂಗತವಾದರೆ ಈಶನು ಮೆಚ್ಚನು. **ಮೃದುವಚನವೇ ಸಕಲ ಜಪಂಗಳಯ್ಯಾ, ಸದುವಿನಯವೆ ಸದಾಶಿವನೊಲಿಮೆಯಯ್ಯಾ.** ಮಾತೆಂಬುದು ಬೆಳಕಿನ ರೂಪದಲ್ಲಿರುವ ದೇವರು. ಇದಕ್ಕಿಂತ ಹೆಚ್ಚಿನ ಮನ್ನಣೆಯ ಸ್ಥಾನವು ಮಾತಿಗೆ ಸಿಗಲಾರದು, ಎಂದು ಮಹಾನುಭಾವಿಗಳಾದ ಶಿವಶರಣರು ಸಾರಿದ್ದಾರೆ. ಇದೇ ಪ್ರಕಾರ ಪ್ರವಾದಿಗಳಾದ ಮಹಮ್ಮದ್ ಪೈಗಂಬರರು "ನಲ್ಮೆಯ ಒಂದು ಸವಿನುಡಿ ಹಾಗೂ ಕ್ಷಮೆಯು ಮನನೋಯಿಸುವ ದಾನ ಧರ್ಮಕ್ಕಿಂತ ಉತ್ತಮ" ಎಂದು ಹೇಳಿದ್ದಾರೆ.

ನುಡಿಯು ಸರಿಯಾಗಿರಬೇಕಾದರೆ ಅದಕ್ಕೆ ಅನುಗುಣವಾದ ನಡೆಯೂ ಇರತಕ್ಕದ್ದು.

ನುಡಿಯಲ್ಲಿ ಎಚ್ಚೆತ್ತು ನಡೆಯಲ್ಲಿ ತಪ್ಪಿದರೆ ।
ಹಿಡಿದಿದ್ದ ಧರ್ಮ ಹೊಡೆಮರಳಿ ಕಚ್ಚುವಾ ।
ಹೆಡೆ ನಾಗ ನೋಡಾ ಸರ್ವಜ್ಞ ॥

ಎಂದು ಸರ್ವಜ್ಞನು ಮಾರ್ಗದರ್ಶನ ಮಾಡಿದ್ದಾನೆ. ಮಾತಿನಲ್ಲಿ ಸಮತೋಲನ ಕಾಯ್ದುಕೊಳ್ಳಲು ಮಾನವನ ಕಾಯಕವು ಉತ್ತಮವಿರಬೇಕು. ಆಹಾರ ವಿಹಾರಗಳಲ್ಲಿ ಜಾಗ್ರತನಾಗಿರಬೇಕು. ಸತ್‌ಸಹವಾಸದಲ್ಲಿರಬೇಕು. ಮಿತತ್ವದ ಜೀವನ ಸಾಗಿಸಬೇಕು. ಇತರರ ಬಗ್ಗೆ ಕಾಳಜಿ ವಹಿಸುವುದರಲ್ಲೂ ವ್ಯಕ್ತವಾಗಬೇಕು.

ಮಹಾನ್ ಅನುಭಾವಿಗಳೆನಿಸಿದ ನಿಜಗುಣರು—

ನಿಂದಿಸಿ ನುಡಿಯದಿರಾರನು, ಮನಸಿಗೆ
ಬಂದಂತೆ ನಡೆಯದಿರಿಹದಲ್ಲಿ
ಕುಂದು ಪಡೆಯದಿರು, ಕಾಮಾದಿಗಳನು ಜಯಿ—
ಸೆಂದು ಕೈವಿಡಿದನುಗ್ರಹಿಸುವ

ಎಂದು ಹೇಳಿದ್ದಾರೆ. "ನಡೆಯೊಳಗೆ ನುಡಿ ತುಂಬಿ, ನುಡಿಯೊಳಗೆ ನಡೆ ತುಂಬಿ, ನಡೆ ನುಡಿ ಎರಡನು ಪರಿಪೂರ್ಣ ತುಂಬಿ ಲಿಂಗವು ಕೂಡ ಬಲ್ಲಾತನೆ ಶರಣ."

ಮಾತು ಮಾಗಿದರೆ ಆಗದು, ಮನ ಮಾಗಬೇಕು. ಮನ ಮಾಗಬೇಕಾದರೆ ಹೃದಯವು ಹರ ಗುರು ಚರರಲ್ಲಿ ಹರಿಯಬೇಕು. ಸತ್ಯ ಸೌಂದರ್ಯವನ್ನು, ನಿತ್ಯಾನಂದವನ್ನು ಸಂಪಾದಿಸಬೇಕೆಂದು ಶರಣರು ಸಾರ್ಥಕ ಮಾತುಗಳನ್ನು ನಮ್ಮ ಇಹಪರ ಎರಡರಲ್ಲಿ ಜಯಗಳಿಸಲು ಹೇಳಿದ್ದಾರೆ.

* * *

ಈಗ ಭಾರತದಲ್ಲಿ ಅಸೂಯೆ, ದ್ವೇಷ ದುಂದುಗಾರಿಕೆ ಹಾಗೂ ಅನಾಚಾರ ಮೊದಲಾದ ದುರ್ಭಾವನೆಗಳು ವಿಪರೀತವಾಗಿ ಹಬ್ಬಿದ ಕಾರಣ ಒಂದು ತರದ ಅಶಾಂತಿ ಹಾಗೂ ಅಸಮತೋಲನ ಸ್ಥಿತಿಯುಂಟಾಗಿದೆ. ಈ ದುಃಸ್ಥಿತಿಗೆ ಮೂಲಕಾರಣ



ಸಾಹಿತ್ಯಕೃಷಿಯಲ್ಲಿ ತೊಡಗಿರುವ ಗುಲ್ಬರ್ಗಾದ ಸೇಡಂನ ನಿವಾಸಿಗಳಾದ ಶ್ರೀಶಿವಲಿಂಗಪ್ಪ ಇಂಗಳಗಿ ತಮ್ಮ ಕೆಲವು ಜನಪ್ರಿಯ ಕೃತಿಗಳಿಂದ ಈಗಾಗಲೇ ಪ್ರಸಿದ್ಧರಾಗಿದ್ದಾರೆ.

ವೆಂದರೆ ಮಾನವಜೀವಿಯು ತೀರ ಅನೀತಿಗೊಳಗಾಗಿ ಜೀವನ ಸಾಗಿಸುತ್ತಿದ್ದಾನೆ. "**ಸದಾಚಾರ ಸದ್ಭಕ್ತಿ ಇಲ್ಲದವರನ್ನು ನಾನೊಲ್ಲೆ ನಯ್ಯಾ**" ಎಂದು ಅಣ್ಣಬಸವಣ್ಣನವರು ಹೇಳಿದ ನಿಷ್ಠುರ ಮಾತು ಯೋಗ್ಯ ಎನಿಸುತ್ತದೆ.

ಎಲ್ಲರೂ ಸುಖದ ಬಾಳುವೆಗಾಗಿ ಪ್ರಯತ್ನಿಸಿದರೂ ನೈಜ ಶಾಂತಿಯು ದೊರೆಯದಂತಾಗಿದೆ. ಸುಖದ ಮಾರ್ಗದಿಂದ ನಾವು ವಿಮುಖರಾಗಿ ಬಾಳುವೆ ಸಾಗಿಸುತ್ತಿರುವೆವು. ನೈಜ ಸುಖ, ಶಾಂತಿಯನ್ನು ಪಡೆಯಲು ಸದಾಚಾರಸಂಪನ್ನ ಮಾರ್ಗವನ್ನು ಅವಲಂಬಿಸಬೇಕಾಗುವುದು. ಸದಾಚಾರವು ನೈಜ ಸುಖವೆಂಬ ಕಟ್ಟಡದ ಭದ್ರ ಬುನಾದಿಯಾಗಿದೆ. ಪರಿಶುದ್ಧ, ಶಾಂತ ಹಾಗೂ ಪರೋಪಕಾರಿ ಜೀವನವೇ ಶ್ರೇಷ್ಠ ಜೀವನವಾಗಿದೆ. ಇದಕ್ಕೆ ಹೊರತಾಗಿರುವ ಸಿರಿವಂತ ಜೀವನವು ಎಷ್ಟೇ ಕಣ್ಣು ಕೋರೈಸುವಂತಿದ್ದರೂ ಶ್ರೇಷ್ಠವಲ್ಲ.

ಸದಾಚಾರದಲ್ಲಿ ನೈತಿಕತೆ, ಶೀಲ ಹಾಗೂ ಸಮತೋಲನ ಸ್ಥಿತಿಗಳು ಅಡಕವಾಗಿವೆ. ಸದಾಚಾರವೇ ಮನುಷ್ಯತ್ವದ ಪ್ರಾಣವೆನಿಸಿದೆ. ಇದು ವ್ಯಕ್ತಿಗೆ ಹಾಗೂ ಸಮಾಜಕ್ಕೆ ಅಮೂಲ್ಯ ಆಭರಣದಂತೆ. ಪ್ರೇಮ ಹಾಗೂ ಪವಿತ್ರತೆಯು ಸದಾಚಾರದ ಬಂಧು-ಭಗಿನಿಯರು. ವಿನಯವು ಸದಾಚಾರದ ತಳಪಾಯ.

ಒಬ್ಬನು ಇನ್ನೊಬ್ಬನೊಡನೆ ಪರಸ್ಪರ ಹಿತವಾಗುವಂತೆ ನಡೆಯುವುದೇ ನೀತಿಕರ ಮಾರ್ಗವೆನಿಸುವುದು. ತದ್ವಿರುದ್ಧ ಆಚರಣೆಯು ನೀತಿಬಾಹಿರವೆನಿಸುತ್ತದೆ. ನೀತಿಯು ದ್ವಿಮುಖವುಳ್ಳದ್ದು. ಇಂತಿಂಥ ಕಾರ್ಯಗಳನ್ನು ಮಾಡಕೂಡದೆಂದು ಹೇಳುವ ನೀತಿ-ವಿಭಾಗಕ್ಕೆ ನಿಷೇಧವೆನ್ನುವರು. ನಿಷೇಧವು ಮನುಷ್ಯರಲ್ಲಿಯ ಪಶುವೃತ್ತಿಯನ್ನು ನಿಯಂತ್ರಿಸುವುದು. ಇಂತಿಂಥ ಕಾರ್ಯಗಳನ್ನು ಮಾಡಬೇಕೆಂದು ಹೇಳುವ ನೀತಿವಿಭಾಗಕ್ಕೆ ವಿಧಾಯಕವೆನ್ನುವರು. ವಿಧಾಯಕವು ದೈವೀಗುಣಗಳನ್ನು ಬೆಳೆಸಲು ಸಹಕಾರಿಯಾಗುವುದು. ನೀತಿ ಎಂಬುದು ಧರ್ಮಾಚಾರದ ಮುಖ್ಯಾಂಗವಾಗಿದೆ. ನೀತಿಪಾಲನೆಯಿಂದ ಮನ ಹಾಗೂ ಬುದ್ಧಿಯ ಶುದ್ಧೀಕರಣವಾಗುತ್ತದೆ.

ಸದಾಚಾರ ಸಂಪನ್ನರಾಗಬಯಸುವ ಪ್ರತಿಯೊಬ್ಬರೂ ಸತ್ಯ, ಅಹಿಂಸೆ, ದಯೆ, ನಿರಹಂಕಾರ, ಅಸ್ತೇಯ, ಬ್ರಹ್ಮಚರ್ಯ ಮೊದಲಾದ ದಿವ್ಯಗುಣಗಳನ್ನು ಅಳವಡಿಸಿಕೊಳ್ಳಬೇಕಾಗುವುದು. ಇದರಿಂದ ಶೀಲವರ್ಧನೆಯಾಗುತ್ತದೆ. "ಇದ್ದುದ ವಂಚನೆಯ ಮಾಡದಿಪ್ಪುದೇ ಶೀಲ, ಇಲ್ಲದುದಕ್ಕೆ ಕಡವ ಮಾಡದಿಪ್ಪುದೇ ಶೀಲ, ಪರಧನ ಪರಸ್ತ್ರೀಯರ ಮುಟ್ಟದಿಪ್ಪುದೇ ಶೀಲ, ಪರದೈವ ಪರಸಮಯಕ್ಕೆ ಅಳುಪದಿಪ್ಪುದೇ ಶೀಲ, ಗುರುನಿಂದೆ ಹರನಿಂದೆ ಚರನಿಂದೆ ಕೇಳದಿಪ್ಪುದೇ ಶೀಲ" ಎಂದು ಬಸವಣ್ಣನವರು ಶೀಲದ ಬಗ್ಗೆ ಸ್ಪಷ್ಟವಾಗಿ ತಿಳಿಸಿರುವರು.

ಮತ್ತೊಂದು ವಚನದಲ್ಲಿ ಅಂತರಂಗ ಬಹಿರಂಗ ಶುದ್ಧಿಯ ಬಗ್ಗೆ ಬಸವಣ್ಣನವರು ಈ ಪ್ರಕಾರ ತಿಳಿಸಿದ್ದಾರೆ :

**ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ ।**
**ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ ।**
**ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ ।**
**ಇದೇ ಅಂತರಂಗ ಶುದ್ಧಿ, ಬಹಿರಂಗ ಶುದ್ಧಿ ।**
**ಇದೇ ನಮ್ಮ ಕೂಡಲಸಂಗಮದೇವರನೊಲಿಸುವ ಪರಿ ॥**

ಮೇಲೆ ನಿವೇದಿಸಿದ ಮಾತುಗಳೆಲ್ಲಾ ಸಾಗರವೇ ಹನಿರೂಪ ತಾಳಿದಂತಾಗಿದೆ. ಈ ಮಾತುಗಳತ್ತ ಲಕ್ಷ್ಯವಹಿಸಿ ಬಲ್ಲಿದ ಸದ್ಗುರುಗಳ ಆಶ್ರಯ ಪಡೆದು ನಿತ್ಯಜೀವನದಲ್ಲಿ ಅಳವಡಿಸಿದರೆ ಮಾತ್ರ ನಮ್ಮ ಬಾಳು ಸದ್ಗುರುಗಳ ಕರುಣೆಯಿಂದ ಸಾರ್ಥಕತೆ ಹೊಂದುತ್ತದೆ. ಹೀಗೆ "ನಡೆ ಚಂದ, ನುಡಿ ಚಂದ"ದ ಜೀವನ ನಮ್ಮದಾಗುತ್ತದೆ.

## ಯೋಗೇನನಿಗೆ ಶಿಕ್ಷಣ



ಸ್ವಾಮಿ ಯೋಗಾನಂದ

ಯೋಗಿನ್ (ಸ್ವಾಮಿ ಯೋಗಾನಂದ) ದಕ್ಷಿಣೇಶ್ವರದ ಬಳಿಯೇ ವಾಸಿಸುತ್ತಿದ್ದ. ಹೀಗಾಗಿ ಶ್ರೀರಾಮಕೃಷ್ಣರ ಸೇವೆಯ ಅವಕಾಶವೂ ಆಗಾಗ ಲಭಿಸುತ್ತಿತ್ತು. ಒಮ್ಮೆ ಗಿರೀಶ್‌ಚಂದ್ರ ಘೋಷನಿಂದ ಕೆಲವು ಮೇಣದ ಬತ್ತಿಗಳನ್ನು ತಮಗಾಗಿ ತರಲು ಪರಮಹಂಸರು ಯೋಗೇನನನ್ನು ಕಳುಹಿಸಿದರು. ಗಿರೀಶನ ಬಳಿಗೆ ಬಂದಾಗ ಅವನು ಪಾನಮತ್ತನಾಗಿದ್ದುದನ್ನು ಕಂಡು ಯೋಗೇನ್‌ಗೆ ದಿಗ್ಭ್ರಮೆಯಾಯಿತು. ಶ್ರೀರಾಮಕೃಷ್ಣರಿಗೆ ಕೆಲವು ಮೇಣದ ಬತ್ತಿಗಳು ಬೇಕು ಎಂದು ಕೇಳಿದಾಗ ಒಂದು ದೊಡ್ಡ ಪೆಟ್ಟಿಗೆಯನ್ನೇ ತೆಗೆದುಕೊ ಎಂದ ಗಿರೀಶ. ನಂತರ ಶ್ರೀರಾಮಕೃಷ್ಣರ ನಿಂದೆ ಪ್ರಾರಂಭಿಸಿದ. ಹಾಗೆ ಬಯ್ಯುತ್ತಿರುವಾಗಲೇ ದಕ್ಷಿಣೇಶ್ವರದ ಕಡೆಗೆ ತಿರುಗಿ ನಮಸ್ಕಾರವನ್ನೂ ಮಾಡುತ್ತಿದ್ದ. ಯೋಗಿನ್‌ಗೆ ಭಯವಾಯಿತು. ಕುಡಿದು ಮತ್ತನಾಗಿರುವ ಭಕ್ತನನ್ನು ಎಂದೂ ಕಂಡಿರಲಿಲ್ಲ ಯೋಗಿನ್. ನಂತರ ಶ್ರೀರಾಮಕೃಷ್ಣರಿಗೆ ವರದಿ ಒಪ್ಪಿಸಿದಾಗ ಅವರು ಹೇಳಿದರು, "ಗಿರೀಶನು ವಿಶೇಷವಾದ ಭಕ್ತ. ಅವನ ಮಾರ್ಗವೇ ಬೇರೆ. ನೀನು ಅವನ ಕೆಟ್ಟ ಮಾತುಗಳನ್ನು ಗಮನಿಸಿದೆ. ಅಂತೆಯೇ ಅವನು ಭಕ್ತಿಯಿಂದ ನಮಸ್ಕರಿಸುತ್ತಿದ್ದುದನ್ನೂ ಕಂಡೆಯಲ್ಲವೇ? ನನ್ನಲ್ಲಿ ಅವನಿಗೆ ಬಹಳ ಪ್ರೀತಿ, ವಿಶ್ವಾಸವಿದೆ." ಮತ್ತೊಬ್ಬರ ಒಳ್ಳೆಯ ಗುಣಗಳನ್ನು ಕಂಡು ಗೌರವಿಸುವ ಪಾಠವಾಯಿತು ಯೋಗಿನ್‌ಗೆ.